ಎಂಜಿನಿಯರಿಂಗ್ ತೆಗೆದುಕೊಳ್ಳುವಾಗ ಖಂಡಿತವಾಗಿಯೂ ಊಹಿಸಿರಲಿಲ್ಲ. ಅಂತಹಾ ವಿಚಿತ್ರ ಸನ್ನಿವೇಶ ಯಾವುದೋ ಸಮಾರಂಭಕ್ಕೆಂದು ನಾನು ಕಾಡಿನ ಮಧ್ಯೆಯಿದ್ದ ನನ್ನ ದೊಡ್ಡಪ್ಪನ ಮನೆಗೆ ಹೋದಾಗ ಉದ್ಭವವಾಗಿಯೇಬಿಟ್ಟಿತ್ತು. ದೊಡ್ಡಪ್ಪನ ಮನೆಯಲ್ಲಿದ್ದ ಲ್ಯಾಂಡ್ ಲೈನ್ ಫೋನಿನ ಬಳಿ ಒಂದು ಚಿಕ್ಕ ಬಲ್ಬು ಹಾಕಿದ್ದರು. ಅವರ ಮನೆಯ ಸುತ್ತ ಕಗ್ಗಾಡಿದ್ದಿದ್ದರಿಂದ ಮಟಮಟ ಮಧ್ಯಾಹ್ನ ಕೂಡಾ ಮನೆಯೊಳಗೆ ಸಂಪೂರ್ಣ ಕತ್ತಲೇ ಇರುತ್ತಿತ್ತು. ಹೀಗಾಗಿ ಫೋನಿನ ಪಕ್ಕ ಇದ್ದ ಫೋನ್ ನಂಬರುಗಳನ್ನು ಬರೆದಿಟ್ಟಿದ್ದ ಬುಕ್ಕು ತೆಗೆದು ನಂಬರ್ ನೋಡಿ ಯಾರಿಗಾದರೂ ಕರೆ ಮಾಡಬೇಕಾದರೆ ಆ ಬಲ್ಬು ಬೆಳಕು ಬೀರುವುದು ಅನಿವಾರ್ಯವಾಗಿತ್ತು.

ಅಂತಹ ಬಲ್ಬು ನಾನು ಹೋಗುವ ಹಿಂದಿನ ದಿನವೇ ಕೈ ಕೊಟ್ಟಿತ್ತು. ಅವರ ಮಗ ಅಂದರೆ ನನ್ನ ಅಣ್ಣ ಕಾರಣಾಂತರಗಳಿಂದ ಸಮಾರಂಭಕ್ಕೆ ಬರುವುದಿಲ್ಲ ಎಂದು ಹೇಳುವುದರ ಜೊತೆಗೆ 'ಅವ್ನಿಗೆ ಎಲ್ಲಾ ಗೊತ್ತಾಗುತ್ತೆ ಅವನ ಕೈಲಿ ಮಾಡ್ಸಿ ಎಂಜಿನಿಯರಿಂಗ್ ಏನು ಮಣ್ ತಿನ್ನೋಕೆ ಮಾಡಿದ್ನಾ?' ಎಂದು ಬಾಂಬು ಹಾಕಿದ್ದ. ಹೀಗಾಗಿ ಕೈಯಲ್ಲಿ ಒಂದು ಟಾರ್ಚು ಹಿಡಿದು ನಿಂತಿದ್ದ ನನ್ನ ಎದುರು ಜೋತಾಡುತ್ತಿದ್ದ ಬಲ್ಬು ನನ್ನ ಮಾನ ಮರ್ಯಾದೆಯನ್ನು ಕಾಪಾಡುವ ಅಥವಾ ಹರಾಜು ಹಾಕುವ ಸಾಮರ್ಥ್ಯವಿದ್ದ ಸಾಧನವಾಗಿ ನಗೆ ಬೀರುತ್ತಿತ್ತು.

ಭೀಕರ ಅಪಘಾತವಾಗಿ ಚಿಕಿತ್ಸೆಗೆ ಬಂದಿರುವ ರೋಗಿಯನ್ನು ವೈದ್ಯರು ನಾಜೂಕಾಗಿ ಪರಿಶೀಲಿಸುವಂತೆ ನಿಧಾನಕ್ಕೆ ಸ್ಕ್ರೂ ಡ್ರೈವರಿನಿಂದ ಸ್ವಿಚ್ ಬೋರ್ಡನ್ನು ಬಿಚ್ಚಿದೆ. ಅಣ್ಣ ಬೇರೆ

